## ೨೦೧೪ರ ಡಿಸೆಂಬರ್ ೨೨ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೨೪ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೪ನೇ ಸಭೆ**ಯು ಮಾನ್ಯ ಪ್ರಭಾರಿ ಕುಲಪತಿಗಳ ಅಧ್ಯಕ್ಷತೆಯಲ್ಲಿ ಡಿಸೆಂಬರ್ ೨೨, ೨೦೧೪ರ ಸೋಮವಾರ ಅಪರಾಹ್ನ ೦೨:೩೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಶ್ರೀನಿವಾಸ ವರಖೇಡಿ,** ಮಾನ್ಯ ಕುಲಪತಿಗಳು (ಪ್ರಭಾರಿ) | ಅಧ್ಯಕ್ಷರು |
| ೨. | **ಪ್ರೊ. ಕೆ.ಈ. ರಾಧಾಕೃಷ್ಣ,** ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ಬೆಂಗಳೂರು | ಸದಸ್ಯರು |
| ೪. | **ಶ್ರೀ ಅಶೋಕ ಡಿ ಬಾಗೋಜಿಕೊಪ್ಪ,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಶ್ರೀ ಡಿ.ಕೆ. ಶಿವಕುಮಾರ್, ಸಹನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರೊ. ಎಂ.ಕೆ ಶ್ರೀಧರ್,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಬೆಂಗಳೂರು | ಸದಸ್ಯರು |
| ೨. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೩. | **ಆಯುಕ್ತರು,** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೫. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು(ಪ್ರ) ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ವಿಷಯಗಳು ಹಾಗೂ ಅದರ ನಿರ್ಣಯಗಳು ಈ ಕೆಳಕಂಡಂತಿವೆ.

**ವಿಷಯ:** **ದಿನಾಂಕ 28.10.2014 ರಂದು ನಡೆದ ಪ್ರಶಾಸನ ಸಮಿತಿ 23ನೇ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳ ಬಗೆಗೆ**

ನಿರ್ಣಯ: ದಿನಾಂಕ 28.10.2014 ರಂದು ನಡೆದ ಪ್ರಶಾಸನ ಸಮಿತಿ 23ನೇ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳ ಬಗೆಗೆ ಸಭೆಯು ವಿಸ್ತೃತವಾಗಿ ಪರಿಶೀಲಿಸಿತು. ಈ ಕೆಳಕಂಡ ಸೂಚನೆಗಳನ್ನು ಸಭೆಯು ಸೂಚಿಸಿತು.

**ವಿಷಯ ಸಂಖ್ಯೆ 8ಕ್ಕೆ** ಸಂಬಂಧಿಸಿದಂತೆ ಘಟಕ ಕಾಲೇಜುಗಳ ಪರಿಷ್ಕೃತ ಪರಿನಿಯಮವನ್ನು ಆದಷ್ಟು ಬೇಗನೆ ಸರ್ಕಾರಕ್ಕೆ ಕಳುಹಿಸಲು ಸಭೆಯು ಸೂಚಿಸಿತು.

**ವಿಷಯ ಸಂಖ್ಯೆ 9ಕ್ಕೆ** ಸಂಬಂಧಿಸಿದಂತೆ ಸಹಾಯಕ ಪ್ರಾಧ್ಯಾಪಕರ ಪಿಎಚ್.ಡಿ ಮತ್ತು ಎಂ.ಫಿಲ್ ವೇತನಶ್ರೇಣಿಗೆ ಮುಂಗಡ ವೇತನಬಡ್ತಿಯನ್ನು ನಿಯಮಾನುಸಾರ ಅನುಷ್ಠಾನಕ್ಕೆ ತರಬೇಕೆಂದು ಕುಲಸಚಿವರಿಗೆ ಸೂಚಿಸಲಾಯಿತು.

**ವಿಷಯ ಸಂಖ್ಯೆ 26ಕ್ಕೆ** ಸಂಬಂಧಿಸಿದಂತೆ ಎಸ್/ಎಸ್‌ಟಿ/ಪ್ರವರ್ಗ 1ರ ವಿದ್ಯಾರ್ಥಿಗಳಿಗೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಉಚಿತವಾಗಿ ಪಠ್ಯಪುಸ್ತಕ ವಿತರಣೆಯ ಬಗ್ಗೆ ಕ್ರಮ ಕೈಗೊಂಡು ವಿಸ್ತೃತ ವರದಿಯನ್ನು ನೀಡಬೇಕೆಂದು ನಿರ್ದೇಶಿಸಲಾಯಿತು.

**ವಿಷಯ ಸಂಖ್ಯೆ 33ಕ್ಕೆ** ಸಂಬಂಧಿಸಿದಂತೆ ಶಾಸ್ತ್ರ/ವೇದ ವಿದ್ವದುತ್ತಮಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶಿಕ್ಷಣ ಪರಿಷತ್ತಿನಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಲು ಸೂಚಿಸಲಾಗಿತ್ತು. ಆದರೆ, ಪರೀಕ್ಷೆಗಳು ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಗ್ರಾಮೀಣ ಪರಿಸರದ ಅಭ್ಯರ್ಥಿಗಳಿಗೆ ಸಮಸ್ಯೆಯಾಗದಂತೆ  ಹಿಂದಿನಂತೆ ಆಯಾಯಾ ಪರೀಕ್ಷಾ ಕೇಂದ್ರಗಳಲ್ಲಿಯೇ ಪರೀಕ್ಷೆ ನಡೆಸುವುದು. ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳಿಗೆ ಮಾತ್ರ ವಿಶ್ವವಿದ್ಯಾಲಯವೇ ನೇರವಾಗಿ ಪರೀಕ್ಷಾಧಿಕಾರಿಯನ್ನು ನಿಯೋಜಿಸಿ ಪರೀಕ್ಷೆಗಳನ್ನು ನಡೆಸುವುದೆಂದು ತೀರ್ಮಾನಿಸಲಾಯಿತು. ವಿದ್ವನ್ಮಧ್ಯಮಾ ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ 20ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ಅತ್ಯಂತ ಸಮೀಪದ ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳನ್ನು ವರ್ಗಾಯಿಸಿ ಪರೀಕ್ಷೆ ನಡೆಸಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ1ಕ್ಕೆ** ಸಂಬಂಧಿಸಿದಂತೆ, ಮಾನಸೋಲ್ಲಾಸ ಗ್ರಂಥಸಂಪಾದನೆಯ ಕಾರ್ಯವು ಈಗಾಗಲೇ ಮುಗಿದಿದ್ದು, ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾದುದರಿಂದ ಇದೇ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ 2ಕ್ಕೆ** ಸಂಬಂಧಿಸಿದಂತೆ, ಪ್ರಸ್ತಾವನೆಯು ಸಿದ್ಧವಾಗಿದ್ದು, 1 ವಾರದ ಒಳಗಾಗಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. ಗೋಕರ್ಣ ಕಾಲೇಜಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ 3ಕ್ಕೆ** ಸಂಬಂಧಿಸಿದಂತೆ, ಕೆಲವು ಸಮಸ್ಯೆಗಳಿರುವ ಕಾರಣ ವೇತನವನ್ನು ಮಾತೃಸಂಸ್ಥೆಯಿಂದಲೇ ಸದ್ಯಕ್ಕೆ ಪಡೆಯುವುದಾಗಿ ಕುಲಸಚಿವರಾದ ಪ್ರೊ. ಎಂ.ಕೆ. ಶ್ರೀಧರ್ ಇವರು ಸಭೆಗೆ ತಿಳಿಸಿದರು. ಇವರ ಮನವಿಯಂತೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಸೂಚಿಸಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ 4ಕ್ಕೆ** ಸಂಬಂಧಿಸಿದಂತೆ, "*ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ಕರ್ತವ್ಯ, ಜವಾಬ್ದಾರಿ, ಪದೋನ್ನತಿ ಮುಂತಾದ ವಿಷಯಗಳನ್ನು ನಿರ್ಬಂಧಿಸುವ ಪರಿನಿಯಮ*"ವನ್ನು ಮಂಡಿಸುವುದಾಗಿ ಡಾ. ವನಿತಾ ರಾಮಸ್ವಾಮಿ, ಇವರು ತಿಳಿಸಿದರು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ 6ಕ್ಕೆ** ಸಂಬಂಧಿಸಿದಂತೆ, ಘಟಕ ಕಾಲೇಜುಗಳ ಅಧ್ಯಾಪಕರ ವಿಲೀನಪ್ರಕ್ರಿಯೆಗೆ ಸಂಬಂಧಿಸಿದ ಪರಿನಿಯಮವನ್ನು ಪ್ರೊ. ಕೆ.ಇ. ರಾಧಾಕೃಷ್ಣ ಇವರು ಅವಗಾಹನೆಗಾಗಿ ಮಂಡಿಸಿದರು. ಈ ಪರಿನಿಯಮವನ್ನು ಆದಷ್ಟು ಬೇಗ ಘನತೆವೆತ್ತ ರಾಜ್ಯಪಾಲರ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸೂಚಿಸಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ 7ಕ್ಕೆ** ಸಂಬಂಧಿಸಿದಂತೆ, ಈಗಾಗಲೇ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವು ಮುಗಿದಿರುವುದರಿಂದ ನೇಮಕಾತಿ ಪ್ರಕ್ರಿಯೆಯ ಮುಂದಿನ ಹಂತವನ್ನು ಪ್ರಾರಂಭಿಸಲು ಸಭೆಯು ಸೂಚಿಸಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ 11ಕ್ಕೆ** ಸಂಬಂಧಿಸಿದಂತೆ, ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆ ಕ್ರಮಗಳನ್ನು ಶೀಘ್ರದಲ್ಲಿಯೇ ಕೈಗೊಳ್ಳಲು ಸಭೆಯು ಸೂಚಿಸಿತು.

**ವಿಷಯ 1: ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿಗೆ ಸ್ಪಷ್ಟೀಕರಣ ನೀಡುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆರ್ಥಿಕ ಮತ್ತು ಶೈಕ್ಷಣಿಕ ವ್ಯವಹಾರಗಳ ಬಗೆಗೆ ದಿನಾಂಕ 12.11.2014ರಿಂದ 18.11.2014ರವರೆಗೆ 7 ಕಂತುಗಳಲ್ಲಿ ಪ್ರಜಾವಾಣಿ ದಿನಪತ್ರಿಕೆಯು "ವಿಶ್ವವಿದ್ಯಾಲಯಗಳ ಹಗರಣ" ಎಂಬ ಶೀರ್ಷಿಕೆಯಡಿಯಲ್ಲಿ, ವಿಶ್ವವಿದ್ಯಾಲಯದ ಬಗೆಗೆ ಲೇಖನಗಳನ್ನು ಪ್ರಕಟಿಸಿತ್ತು. ವಿಶ್ವವಿದ್ಯಾಲಯದ ಎಲ್ಲ ವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಅನೇಕ ವಿಷಯಗಳಲ್ಲಿ ಕಂಡುಬಂದ ಸತ್ಯಾಂಶಗಳನ್ನು ಪ್ರಕಟವಾದ ಪ್ರತಿಯೊಂದು ವಿಷಯದಲ್ಲಿ ದಾಖಲೆಗಳ ಸಹಿತ ವಾಸ್ತವ ವರದಿಯನ್ನು ನೀಡುವುದು ವಿಶ್ವವಿದ್ಯಾಲಯದ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಪತ್ರದ ಜೊತೆಗೆ ಪ್ರಕಟವಾದ ಏಳು ವರದಿಗಳಿಗೂ ಎಲ್ಲ ದಾಖಲೆಗಳನ್ನು ಅಡಕಗೊಳಿಸಿ ವಿಶ್ವವಿದ್ಯಾಲಯವು ಸರ್ಕಾರಕ್ಕೆ ಹಾಗೂ ರಾಜ್ಯಪಾಲರಿಗೆ ಈಗಾಗಲೇ ಸಲ್ಲಿಸಿರುತ್ತದೆ. ಈ ವರದಿಯನ್ನು ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ಕುಲಪತಿಗಳು ಈ ಸಭೆಗೆ ಎಲ್ಲ ದಾಖಲೆಗಳನ್ನು ಮಂಡಿಸುವ ಮೂಲಕ ವಿವರಣೆ ನೀಡಿದರು. ವಿವರಣೆಯನ್ನು ಪಡೆದ ಸಭೆಯು, ವಿಶ್ವವಿದ್ಯಾಲಯವು ಸರ್ಕಾರಕ್ಕೆ ಹಾಗೂ ರಾಜ್ಯಪಾಲರಿಗೆ ಸಲ್ಲಿಸಿರುವ ಈ ವರದಿಯು ಸ್ಪಷ್ಟವಾಗಿದೆ ಮತ್ತು ದಾಖಲೆಗಳ ಸಹಿತ ವಸ್ತುನಿಷ್ಠವಾಗಿದೆಯೆಂದು ದೃಢೀಕರಿಸಿತು. ಕುಲಪತಿಗಳು ಕೈಗೊಂಡ ಈ ಕ್ರಮಕ್ಕೆ ಸಭೆಯು ಸಮರ್ಥನೆಯನ್ನು ನೀಡಿತು.**

**ವಿಷಯ 2: ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ವೇದ ಮಹಾವಿದ್ಯಾಲಯದಲ್ಲಿ ಪ್ರಭಾರಿ ಪ್ರಾಂಶುಪಾಲರಾಗಿರುವ ವಿದ್ವಾನ್ ಜಿ.ಸಿ ರಾಜಶೇಖರಯ್ಯ ಇವರನ್ನು ಆಡಳಿತ ಮಂಡಳಿಯು ಮುಂಬಡ್ತಿ ನೀಡಿ ಖಾಯಂ ಪ್ರಾಂಶುಪಾಲರಾಗಿ ನೇಮಕ ಮಾಡಿರುವುದನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ವೇದ ಮಹಾವಿದ್ಯಾಲಯದಲ್ಲಿ ದಿನಾಂಕ: 31.08.2014ರಂದು ನಿವೃತ್ತಿಯಿಂದ ಖಾಲಿಯಾದ ಪ್ರಾಂಶುಪಾಲರ ಹುದ್ದೆಗೆ ಆಡಳಿತ ಮಂಡಳಿಯು ಪ್ರಭಾರ ಪ್ರಾಂಶುಪಾಲರಾಗಿ ವಿದ್ವಾನ್ ಜಿ.ಸಿ ರಾಜಶೇಖರಯ್ಯರವರನ್ನು ಪ್ರಭಾರ ಪ್ರಾಂಶುಪಾಲರಾಗಿ ನೇಮಕ ಮಾಡಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅನುಮೋದನೆ ಪಡೆಯಲಾಗಿತ್ತು. ಆನಂತರದಲ್ಲಿ ಆಡಳಿತ ಮಂಡಳಿಯು ಸಭೆ ನಡೆಸಿ ಸೇವಾ ಜೇಷ್ಠತೆಯಲ್ಲಿ ಹಿರಿಯರಾದ ಹಾಗೂ ವಿದ್ಯಾರ್ಹತೆವುಳ್ಳ ವಿದ್ವಾನ್ ಜಿ.ಸಿ. ರಾಜಶೇಖರಯ್ಯನವರನ್ನು ಖಾಯಂ ಪ್ರಾಂಶುಪಾಲರನ್ನಾಗಿ ನೇಮಕ ಮಾಡಿ ವೇತನ ನಿಗಧಿಪಡಿಸಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿದೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಹಿಂದೆಯು ಪ್ರಾಧ್ಯಾಪಕರ ಹುದ್ದೆಯಲ್ಲಿ ವೇತನ ಶ್ರೇಣಿ 28100/50100ರಲ್ಲಿ ಮೂಲ ವೇತನ 35400 ರೂಗಳನ್ನು ಪಡೆಯುತ್ತಿದ್ದರು. ಖಾಯಂ ಪ್ರಾಂಶುಪಾಲರಾಗಿ ಮುಂಬಡ್ತಿ ಪಡೆದ ನಂತರ ವೇತನ ಶ್ರೇಣಿ 36300/53850ರಲ್ಲಿ ಮೂಲ ವೇತನ 36300ಕ್ಕೆ ನಿಗದಿಪಡಿಸಬೇಕಾಗುತ್ತದೆ ಎಂಬ ಅಂಶವನ್ನು ತಿಳಿಸುತ್ತಾ ಇದರ ಅನುಮೋದನೆಗಾಗಿ ಪ್ರಶಾಸನ ಸಮಿತಿ ಸಭೆಗೆ ಮಂಡಿಸಿದೆ.

ನಿರ್ಣಯ: **ಖಾಯಂ ಪ್ರಾಂಶುಪಾಲರಾಗಿ ಮುಂಬಡ್ತಿ ನೀಡಿರುವುದಕ್ಕೆ ನಿಯಮಾನುಸಾರ ಸಭೆಯು ಅನುಮೋದನೆ ನೀಡಿತು.**

**ವಿಷಯ 3: ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಪ್ರಚಾರಕ ಸಮಿತಿ, ಜಮಖಂಡಿ, ಬಾಗಲಕೋಟೆ ಜಿಲ್ಲೆ, ಈ ಸಂಸ್ಥೆಯು ನಡೆಸುವ ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ – ಈ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಶ್ರೀ ಆರ್.ಪಿ.ಜೋಶಿ ಇವರನ್ನು ಆಡಳಿತ ಮಂಡಳಿಯು ಪ್ರಾಧ್ಯಾಪಕರಾಗಿ ಮುಂಬಡ್ತಿ ನೀಡಿ ಪ್ರಭಾರಿ ಪ್ರಾಚಾರ್ಯರಾಗಿ ನೇಮಕ ಮಾಡಿರುವುದನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ – ಈ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ವಿದ್ವಾನ್ ಆರ್.ಪಿ. ಜೋಶಿ ಇವರನ್ನು ಪ್ರಾಧ್ಯಾಪಕರಾಗಿ ಅನುಮೋದನೆಗಾಗಿ ಆಡಳಿತ ಮಂಡಳಿಯು ಸಭೆ ನಡೆಸಿ ಸೇವಾ ಜೇಷ್ಠತೆಯಲ್ಲಿ ಹಿರಿಯರಾದ ಹಾಗೂ ವಿದ್ಯಾರ್ಹತೆವುಳ್ಳ ವಿದ್ವಾನ್ ಆರ್.ಪಿ. ಜೋಶಿ ಇವರನ್ನು ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿ ವೇತನ ನಿಗದಿಪಡಿಸಿ ಪ್ರಸ್ತಾವನೆಯನ್ನು ಸಲ್ಲಿಸಿದೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಹಿಂದೆ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ವೇತನ ಶ್ರೇಣಿ 28100/50100 ಮೂಲ ವೇತನ 45300ರೂಗಳನ್ನು ಪಡೆಯುತ್ತಿದ್ದಾರೆ. ಪ್ರಾಧ್ಯಾಪಕರಾಗಿ ಮುಂಬಡ್ತಿ ಪಡೆದ ನಂತರ ವೇತನ ಶ್ರೇಣಿ 30400/51300 ಮೂಲವೇತನ 46500ರೂಗಳನ್ನು ನಿಗದಿಪಡಿಸಿದೆ. ಮಾಸಿಕ ರೂ. 1200ರಂತೆ ವಾರ್ಷಿಕ ರೂ.14400 ಹೆಚ್ಚುವರಿಯಾಗಿ ನೀಡಬೇಕಾಗುತ್ತದೆ. ದಿನಾಂಕ:31.03.2013ರಂದು ನಿವೃತ್ತಿಯಿಂದ ಖಾಲಿಯಾದ ಪ್ರಾಂಶುಪಾಲರ ಹುದ್ದೆಗೆ ಆಡಳಿತ ಮಂಡಳಿಯು ಪ್ರಭಾರ ಪ್ರಾಂಶುಪಾಲರಾಗಿ ವಿದ್ವಾನ್ ಆರ್.ಪಿ.ಜೋಶಿಯವರನ್ನು ನೇಮಕ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿದೆ ಎಂಬ ಅಂಶವನ್ನು ತಿಳಿಸುತ್ತಾ ಇದರ ಅನುಮೋದನೆಗಾಗಿ ಸಭೆಗೆ ಮಂಡಿಸಿದೆ.

ನಿರ್ಣಯ: **ಪ್ರಾಧ್ಯಾಪಕ ಹುದ್ದೆಗೆ ಮುಂಬಡ್ತಿ ನೀಡಿ ಪ್ರಭಾರಿ ಪ್ರಾಚಾರ್ಯರಾಗಿ ನೇಮಕ ಮಾಡಲು ಸಭೆಯು ಅನುಮೋದನೆ ನೀಡಿತು.**

**ವಿಷಯ 4: ಸಹಾಯಕ ಪ್ರಾಧ್ಯಾಪಕರ ಖಾಯಂಪೂರ್ವ ಸೇವಾವಧಿಯನ್ನು ಘೋಷಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರು 12.11.2013ರಂದು ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಯು.ಜಿ.ಸಿ ನಿಯಮಗಳು ಹಾಗೂ ದಿನಾಂಕ : 18.02.2014ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 19ನೇ ವಿಶೇಷ ಸಭೆಯ ನಿರ್ಣಯದ ಅನುಸಾರ, ದಿನಾಂಕ 11.11.2014ರಂದು ಒಂದು ವರ್ಷದ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾರೆ. ಇವರ ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಲು ಕೋರಿರುತ್ತಾರೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ. (ಅನುಬಂಧ – 1)

ನಿರ್ಣಯ: **ಈ ಬಗ್ಗೆ ಸಭೆಯು ಚರ್ಚೆ ನಡೆಸಿತು. ಈ ವಿಷಯದಲ್ಲಿ ಯು.ಜಿ.ಸಿಯ ಮತ್ತು ಕ.ಸಂ.ವಿ ಸೇವಾ ನಿಯಮಗಳು ಹಾಗೂ ರಾಜ್ಯ ಸರ್ಕಾರದ ನಿಯಮ ಹಾಗೂ ಆದೇಶಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಲಾಯಿತು.**

| | |
|---|---|
| **ಡಾ. ವನಿತಾ ರಾಮಸ್ವಾಮಿ**<br>ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ | ಅಧ್ಯಕ್ಷರು ಮತ್ತು ಸಭಾ ಸಂಯೋಜಕರು |
| **ಪ್ರೊ. ಕೆ. ಈ. ರಾಧಾಕೃಷ್ಣ**<br>ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ | ಸದಸ್ಯರು |
| **ಶ್ರೀ ಬಿ.ಎಸ್. ಜಾಪಾಲಿ**<br>ನಿವೃತ್ತ ಕಾರ್ಯದರ್ಶಿಗಳು (ಉ.ಶಿ.), ಕರ್ನಾಟಕ ಸರ್ಕಾರ | ಸದಸ್ಯರು |
| **ಶ್ರೀ ಆರ್. ಆರ್. ಕುಲಕರ್ಣಿ**<br>ನಿವೃತ್ತ ಪ್ರಾಚಾರ್ಯರು, ಶಿವಮೊಗ್ಗ (ತಜ್ಞರು) | ಸದಸ್ಯರು |
| **ಶ್ರೀ ಸಿ. ವೆಂಕಟೇಶ್**<br>ಕಾನೂನು ಸಲಹೆಗಾರರು, ಕ.ಸಂ.ವಿ | ಸದಸ್ಯರು |

**ಈ ಸಮಿತಿಯು ಆದಷ್ಟು ಬೇಗ ಸಭೆ ಸೇರಿ ಸಮಗ್ರ ವರದಿಯನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಭೆಯು ಸೂಚಿಸಿತು. ಈ ವರದಿಯನ್ನು ಪ್ರಶಾಸನ ಸಮಿತಿಯ ಮುಂದಿನ ಸಭೆಯಲ್ಲಿ ಮಂಡಿಸಲು ನಿರ್ಣಯ ಕೈಗೊಳ್ಳಲಾಯಿತು.**

**ವಿಷಯ 5: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಡೆಸಿದ "ಸಂಸ್ಕೃತ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಮಹಿಳೆಯರ ಪಾತ್ರ" ಎಂಬ ರಾಷ್ಟ್ರೀಯ ವಿಚಾರಸಂಕಿರಣದ ಒಟ್ಟು ವೆಚ್ಚವನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸೆಪ್ಟೆಂಬರ್ ತಿಂಗಳ 15,16,17ರಂದು "ಸಂಸ್ಕೃತ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಮಹಿಳೆಯರ ಪಾತ್ರ" ಎಂಬ ರಾಷ್ಟ್ರೀಯ ವಿಚಾರಸಂಕಿರಣವನ್ನು ನಡೆಸಿತು. ಈ ವಿಚಾರಸಂಕಿರಣದ ಒಟ್ಟು ವೆಚ್ಚವನ್ನು ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

| Sl no | PURPOSE | AMOUNT |
|---|---|---|
| 1 | Printing (Brochure + Abstract + Invitation) | 60,388-00 |
| 2 | Press meet + Silicon city news | 6,040-00 |
| 3 | Stationary + Conference Bags | 42,642-00 |
| 4 | Rented car | 8,305-00 |
| 5 | Catering | 90,455-00 |
| 6 | Bed & pillows etc + Projector screen | 39,950-00 |
| 7 | Photo | 8,400-00 |
| 8 | Garlands & shawls etc | 24,867-00 |
| 9 | Advisory meeting | 3,000-00 |
| 10 | Accommodation | 25,000-00 |
| | **Total** | **3,09,047-00** |

**Expenditure - 3,09,047-00**

**Income (Registration) - 64,300-00**

**Income Advertisement - 25,000-00**

---

**Total expenditure - 2,19,747-00**

ನಿರ್ಣಯ: **ಪ್ರಸ್ತಾವಿತ ವಾಸ್ತವ ವೆಚ್ಚಕ್ಕೆ ಸಭೆಯು ಅನುಮೋದನೆ ನೀಡಿತು.**

**ವಿಷಯ 6: ಪೂರ್ವಪ್ರಾಥಮಿಕ ಪರಿಪೂರ್ಣ ಶಿಕ್ಷಣವನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ಥಾಪಿತವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಪ್ರಥಮಾ, ಕಾವ್ಯ, ಸಾಹಿತ್ಯ ಪಾಠ್ಯಕ್ರಮದಂತೆ ತರಗತಿಗಳನ್ನು ನಡೆಸುತ್ತಿದೆ. ಪ್ರಥಮಾ ಹಾಗೂ ಕಾವ್ಯ ತರಗತಿಗಳು ಪೂರಕ ಶಿಕ್ಷಣವಾಗಿದ್ದು, ಸಾಹಿತ್ಯ ತರಗತಿಗಳಿಂದ ಪೂರಕ ಶಿಕ್ಷಣವೆಂದು ಗುರುತಿಸಲಾಗಿದೆ. ಪ್ರಥಮಾ, ಕಾವ್ಯ, ಸಾಹಿತ್ಯ ತರಗತಿಗಳನ್ನು ಪೂರ್ಣ ಶಿಕ್ಷಣದಂತೆ ರೂಪಿಸಿ ಆಧುನಿಕ ವಿಷಯಗಳಾದ ಗಣಿತ, ವಿಜ್ಞಾನ ಮುಂತಾದ

ವಿಷಯಗಳನ್ನು ಸೇರಿಸಿ ಪ್ರತ್ಯೇಕ ಪರ್ಯಾಯ ಶಿಕ್ಷಣ ಪದ್ಧತಿಯನ್ನು ರೂಪಿಸಬಹುದಾಗಿದೆ. ಈ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಇಂತಹ ಪ್ರಸ್ತಾವನೆಯ ಬಗೆಗೆ ಸಭೆಯು ಸಂತಸ ವ್ಯಕ್ತಪಡಿಸಿ ತಾತ್ವಿಕ ಒಪ್ಪಿಗೆ ನೀಡಿತು. ಈ ಬಗ್ಗೆ ಕೆಳಕಂಡಂತೆ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು 1 ತಿಂಗಳ ಒಳಗಾಗಿ ಸಭೆ ಸೇರಿ ಸಮಗ್ರ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಸಭೆಯು ಸೂಚಿಸಿತು.**

| | |
|---|---|
| **ಡಾ. ವನಿತಾ ರಾಮಸ್ವಾಮಿ**<br>ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ | ಅಧ್ಯಕ್ಷರು |
| **ಡಾ. ಗುರುರಾಜ ಕರ್ಜಗಿ**<br>ಶಿಕ್ಷಣ ತಜ್ಞರು, ಬೆಂಗಳೂರು | ಸದಸ್ಯರು |
| **ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ**<br>ನಿವೃತ್ತ ಪ್ರಾಚಾರ್ಯರು, ಸಿದ್ಧಗಂಗಾ, ತುಮಕೂರು | ಸದಸ್ಯರು |
| **ಡಾ. ವಿ. ಶ್ರೀನಿಧಿ**<br>ಐ.ಐ.ಎಂ.ಬಿ, ಬೆಂಗಳೂರು | ಸದಸ್ಯರು |
| **ಪ್ರೊ. ವಿ. ಗಿರೀಶ್ ಚಂದ್ರ**<br>ನಿರ್ದೇಶಕರು, ಸಂ.ಶಿ.ನಿರ್ದೇಶನಾಲಯ, ಕ.ಸಂ.ವಿ | ಸದಸ್ಯರು |
| **ಡಾ. ವೀರನಾರಾಯಣ ಪಾಂಡುರಂಗಿ**<br>ನಿರ್ದೇಶಕರು, ಅಧ್ಯಯನಾಂಗ, ಕ.ಸಂ.ವಿ | ಸದಸ್ಯರು |
| **ವಿದುಷಿ ಶ್ರುತಿ ಎಚ್.ಕೆ**<br>ಯೋಜನಾ ಸಹಾಯಕರು (ಶೈಕ್ಷಣಿಕ), ಕ.ಸಂ.ವಿ | ಸಂಚಾಲಕರು |

**ವಿಷಯ 7: ಆದರ್ಶ ಪಾಠಶಾಲಾ/ಕಾಲೇಜು ಪ್ರೋತ್ಸಾಹ ಯೋಜನೆಯನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಡಿಯಲ್ಲಿ ಸ್ಥಾಪಿತವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಆಡಳಿತಕ್ಕೆ ಒಳಪಟ್ಟ ಅನೇಕ ಸಂಸ್ಕೃತ ಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಅನುದಾನ ರಹಿತ ಪಾಠಶಾಲೆಗಳಿಗೆ ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ಸಹಾಯಧನ ಮುಂತಾದ ಸವಲತ್ತುಗಳನ್ನು ಒದಗಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಲಯವಾರು 1–2 ಪಾಠಶಾಲೆಗಳನ್ನು **"ಆದರ್ಶ ಪಾಠಶಾಲಾ"** ಎಂದು ಗುರುತಿಸಿ ಪ್ರೋತ್ಸಾಹಧನವನ್ನು ನೀಡಬಹುದಾಗಿದೆ. ಇದೇ ರೀತಿ, ಅನುದಾನ ರಹಿತ ಕಾಲೇಜುಗಳಲ್ಲಿ ರಾಜ್ಯಮಟ್ಟದ 1–2 ಕಾಲೇಜಿಗಳನ್ನು ಗುರುತಿಸಿ **"ಅದರ್ಶ ಕಾಲೇಜು"** ಎಂದು ಪರಿಗಣಿಸಿ ಪ್ರೋತ್ಸಾಹಧನವನ್ನು ನೀಡಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಪೂರ್ವಪ್ರಾಥಮಿಕ ಪರಿಪೂರ್ಣ ಶಿಕ್ಷಣದ ಪ್ರಸ್ತಾವನೆಯನ್ನು ರೂಪಿಸುವ ಸಮಿತಿಯೇ ಈ ಯೋಜನೆಯ ನಿಯಮಾವಳಿಗಳನ್ನು ರೂಪಿಸಿ ನೀಡುವಂತೆ ಸೂಚಿಸಲಾಯಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು :**

**ವಿಷಯ 1: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನೋಡಲ್/ಎ.ಐ.ಎಸ್.ಎಚ್.ಇ ಸೆಲ್ ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಭಾರತ ಸರ್ಕಾರದ ಮಾನವ ಸಂಸಾಧನ ವಿಕಾಸ ಮಂತ್ರಾಲಯ(ಎಂ.ಎಚ್.ಆರ್.ಡಿ)ದ ವತಿಯಿಂದ ವಿಶ್ವವಿದ್ಯಾಲಯಗಳ ವಿಸ್ತೃತವಾದ ಮಾಹಿತಿತಂತ್ರ (ಡೇಟಾಬೇಸ್) ಅನ್ನು ನಿರ್ಮಿಸುವ ಸಂಬಂಧ ಆಲ್ ಇಂಡಿಯಾ ಸರ್ವೇ ಆಫ್ ಹೈಯರ್ ಎಡ್ಯುಕೇಷನ್ (ಎ.ಐ.ಎಸ್.ಎಚ್.ಇ) ಎಂಬುದನ್ನು ರೂಪಿಸಿ, ಅದರ ಅಡಿಯಲ್ಲಿ ದೇಶಾದ್ಯಂತ ಸುದೀರ್ಘ ಮಾಹಿತಿ, ಅಂಕಿ ಅಂಶಗಳನ್ನು ಪ್ರತಿವರ್ಷ ಸಂಗ್ರಹಿಸುತ್ತದೆ. ಮಾನವ ಸಂಸಾಧನ ವಿಕಾಸ ಮಂತ್ರಾಲಯದ ಪತ್ರಸಂಖ್ಯೆ : D O. No. F 19-19/2014 Statರಲ್ಲಿ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿಯೂ ನೋಡಲ್/ಎ.ಐ.ಎಸ್.ಎಚ್.ಇ ಸೆಲ್ ಸ್ಥಾಪಿಸುವಂತೆ ನಿರ್ದೇಶಿಸಲಾಗಿದೆ. ಈ ಕೋಶ(ಸೆಲ್)ವು ಎ.ಐ.ಎಸ್.ಎಚ್.ಇ ಮತ್ತು ನೋಡಲ್‌ಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತದೆ. ನಮ್ಮ ವಿಶ್ವವಿದ್ಯಾಲಯದಲ್ಲಿಯೂ ನೋಡಲ್/ಎ.ಐ.ಎಸ್.ಎಚ್.ಇ ಸೆಲ್ ಸ್ಥಾಪಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು.**

**ವಿಷಯ 2: ಡಿ.ಲಿಟ್ ವಿದ್ಯಾವಾಚಸ್ಪತಿ ಪರಿಷ್ಕೃತ ಪರಿನಿಯಮವನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈ ಹಿಂದೆ ಡಿ.ಲಿಟ್ ವಿದ್ಯಾವಾಚಸ್ಪತಿ ಪರಿನಿಯಮವನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆಯನ್ನು ಪಡೆದಿತ್ತು. ಈಗಿರುವ ಯು.ಜಿ.ಸಿ ನಿಯಮಗಳ ಅನುಸಾರ ಈ ಪರಿನಿಯಮವನ್ನು ಪರಷ್ಕರಿಸಿ ಮತ್ತೊಮ್ಮೆ ಸಿದ್ಧಪಡಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಪರಿಷ್ಕೃತ ಪರಿನಿಯಮವನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು. 2014–15ನೇ ಸಾಲಿನಿಂದ ಅನುಷ್ಠಾನಕ್ಕೆ ತರಲು ಸಭೆಯು ಸೂಚಿಸಿತು.**

**ವಿಷಯ 3: "ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ಕರ್ತವ್ಯ, ಜವಾಬ್ದಾರಿ, ಪದೋನ್ನತಿ ಮುಂತಾದ ವಿಷಯಗಳನ್ನು ನಿರ್ಬಂಧಿಸುವ ಪರಿನಿಯಮ"ವನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯದ 23ನೇ ಪ್ರಶಾಸನ ಸಮಿತಿಯ ನಿರ್ಣಯದಂತೆ ಈ ಪರಿನಿಯಮವನ್ನು ರೂಪಿಸಲು ತಜ್ಞ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಪರಿನಿಯಮವನ್ನು ರೂಪಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ, "ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ಕರ್ತವ್ಯ, ಜವಾಬ್ದಾರಿ, ಪದೋನ್ನತಿ ಮುಂತಾದ ವಿಷಯಗಳನ್ನು ನಿರ್ಬಂಧಿಸುವ ಪರಿನಿಯಮ"ವನ್ನು ರಚಿಸಿ ಸರ್ಕಾರಕ್ಕೆ ಸಲ್ಲಿಸಿ ಘನತೆವೆತ್ತ ರಾಜ್ಯಪಾಲರ ಅಂಕಿತ ಪಡೆಯಬೇಕಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **"ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ಕರ್ತವ್ಯ, ಜವಾಬ್ದಾರಿ, ಪದೋನ್ನತಿ ಮುಂತಾದ ವಿಷಯಗಳನ್ನು ನಿರ್ಬಂಧಿಸುವ ಪರಿನಿಯಮ"ವನ್ನು ಡಾ. ವನಿತಾ ರಾಮಸ್ವಾಮಿ, ಇವರು ಮಂಡಿಸಿದರು. ಈ ಬಗ್ಗೆ ಚರ್ಚೆ ನಡೆಯಿತು. ಯೋಜನಾ ಸಹಾಯಕರ ಪದನಾಮದ ಪುನರ್ನಾಮಕರಣದ ಸಂದರ್ಭದಲ್ಲಿ ಉಂಟಾಗುವ ವೇತನಶ್ರೇಣಿಯ ಅಂತರವನ್ನು ಗಮನಿಸಿ 8 ವರ್ಷಗಳ ಕಾಲ ಬೇಕಾಗಬಹುದೆಂದು ಸಭೆಯು ಅಭಿಪ್ರಾಯ ವ್ಯಕ್ತಪಡಿಸಿತು. ಈ ಪರಿನಿಯಮ ರಚನಾ ಸಮಿತಿಯ ಅಧ್ಯಕ್ಷರಾದ ಡಾ. ವನಿತಾ ರಾಮಸ್ವಾಮಿ, ಇವರು ಈ ವೇತನಮಾನದ ಅಂತರವನ್ನು ಪರಿಶೀಲಿಸಿ ಯೋಜನಾ ಸಹಾಯಕರ ಹುದ್ದೆಯಲ್ಲಿರುವವರು ಸಹಾಯಕ ಪ್ರಾಧ್ಯಾಪಕ ಹುದ್ದೆಯ ವೇತನಶ್ರೇಣಿಯನ್ನು ಯಾವಾಗ ಪ್ರವೇಶಿಸುತ್ತಾರೋ, ಅಷ್ಟು ವರ್ಷಗಳನ್ನು (ಅಥವಾ ಹತ್ತಿರದ ವರ್ಷವನ್ನು) ಈ ಹಿನ್ನೆಲೆಯಲ್ಲಿ ರಾಜ್ಯದ ವಿಜ್ಞಾನ, ಕಲಾ ಹಾಗೂ ವಾಣಿಜ್ಯ ಸಂಶೋಧನ ಸಂಸ್ಥೆಗಳ ಮಾದರಿಯಲ್ಲಿ ಪರಿಗಣಿಸಲು ಸೂಚಿಸಿದರು. ಈ ಪರಿನಿಯಮವನ್ನು ಅಂಗೀಕರಿಸಿ ಘನತೆವೆತ್ತ ರಾಜ್ಯಪಾಲರ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸೂಚಿಸಿತು.**

**ವಿಷಯ 4: ವಿಶ್ವವಿದ್ಯಾಲಯದ ಘಟಿಕೋತ್ಸವ ಪ್ರಮಾಣಪತ್ರದಲ್ಲಿ ಭಾವಚಿತ್ರವನ್ನು ಅಳವಡಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುವ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ಪ್ರಮಾಣಪತ್ರದಲ್ಲಿ ಭಾವಚಿತ್ರವನ್ನು ಅಳವಡಿಸುವುದು ಸೂಕ್ತವಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳೂ ಕೂಡ ಮನವಿಯನ್ನು ಸಲ್ಲಿಸಿರುತ್ತಾರೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಈ ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು. ವಿದ್ಯಾರ್ಥಿಗಳ ಪರೀಕ್ಷಾ ಚೀಟಿ (Admission Ticket)ಯಲ್ಲಿಯೂ ಕೂಡ ಭಾವಚಿತ್ರವನ್ನು ಅಳವಡಿಸಲು ಸಭೆಯು ಸೂಚಿಸಿತು.**

**ವಿಷಯ 5: ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯದ ಒಟ್ಟು ವೆಚ್ಚವನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು 2014–15ನೇ ಸಾಲಿನಲ್ಲಿ ನಡೆಸುವ ಪ್ರಥಮಾ ಕಾವ್ಯ, ಸಾಹಿತ್ಯ ಹಾಗೂ ವಿಶ್ವವಿದ್ಯಾಲಯವು ನಡೆಸುವ ಬಿ.ಎ ಮತ್ತು ಎಂ.ಎ ಪರೀಕ್ಷಾ ಕಾರ್ಯಕ್ಕೆ ವೆಚ್ಚದ ಅಂದಾಜು ವಿವರವನ್ನು ಪ್ರಶಾಸನ ಸಮಿತಿ ಒಪ್ಪಿಗೆಗಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**ಪರೀಕ್ಷೆಯ ಪೂರ್ವ ವೆಚ್ಚದ ವಿವರ**

| ಕ್ರ.ಸಂ | ವಿವರ | ಪ್ರಮಾಣ | ಮೊತ್ತ |
|---|---|---|---|
| 1 | ಪ್ರಥಮಾ | 2 ಸೆಟ್ 200 | 400 |
| 2 | ಕಾವ್ಯ | 2*6 ಸೆಟ್ 200*12 | 2400 |
| 3 | ಸಾಹಿತ್ಯ | 2*7 ಸೆಟ್ 200*14 | 2800 |
| 4 | ಪ್ರಶ್ನಪತ್ರಿಕೆ ಸಭೆಗೆ | ಪ್ರಥಮಾ, ಕಾವ್ಯ, ಸಾಹಿತ್ಯ | 14000 |
| 5 | ಡಿ.ಟ.ಪಿ ವೆಚ್ಚ | ಪ್ರಥಮಾ, ಕಾವ್ಯ, ಸಾಹಿತ್ಯ | 2000 |

| | | | |
|---|---|---|---|
| 6 | ಪರೀಕ್ಷಾ ಅಧಿಸೂಚನೆ ಮುದ್ರಣ | 1000 ಪ್ರತಿಗೆ | 3000 |
| 7 | ಉತ್ತರ/ಪ್ರಶ್ನೆ/ಪತ್ರಿಕೆ ಮುದ್ರಣ | ಪ್ರಥಮಾ. ಕಾವ್ಯ | 400000 |
| 8 | ಸಾಹಿತ್ಯ ಉತ್ತರ ಪತ್ರಿಕೆ ಮುದ್ರಣ | ಉತ್ತರ/ಪ್ರಶ್ನೆ ಪತ್ರಿಕೆಮುದ್ರಣ | 50000 |
| 9 | ಪರೀಕ್ಷಾ ಸಾಮಾಗ್ರಿಗಳ ಮುದ್ರಣ | | 50000 |
| 10 | ಮಾರ್ಗಗಳಿಗೆ – ಪ್ರಶ್ನೆಪತ್ರಿಕೆ. ಉತ್ತರ ಪತ್ರಿಕೆ ದಿನಭತ್ಯೆ ಇತ್ಯಾದಿ | ತಲುಪಿಸಲು ಸಾದಿಲ್ವಾರು ವೆಚ್ಚ | 30000 |
| 11 | ಪರೀಕ್ಷಾ ಕೇಂದ್ರಗಳಿಗೆ | ಸಿ,ಜಿ,ವೆಚ್ಚ | 250000 |
| 12 | ಎನ್.ಆರ್ ಪರಿಶೀಲನ ಕಾರ್ಯಕ್ಕೆ ಬಂದ ಶಿಕ್ಷಕರಿಗೆ ಸ್ಥಳೀಯ ಪ್ರಯಾಣ ವೆಚ್ಚಕ್ಕೆ | 20.000 | 20000 |
| 13 | ಎನ್.ಆರ್ ಪರಿಶೀಲನ ಕಾರ್ಯ.ಕಾಫಿ, ಟೀ ಸಾದಿಲ್ವಾರು | 10.000 | 10000 |
| | | | **834600** |

**ಪರೀಕ್ಷೆಯ ನಂತರದ ವೆಚ್ಚದ ವಿವರ (ಮೌಲ್ಯ ಮಾಪನ ವೆಚ್ಚ)**

| | | | |
|---|---|---|---|
| 1 | ಪ್ರಥಮಾ 12.000 * 2 | 24.000 ಪತ್ರಿಕೆಗೆ * 3 ರೂಪಾಯಿ | 72000 |
| | ವೇದ ಪ್ರವೇಶ = 700 ಪತ್ರಿಕೆಗೆ | 3 ರೂಪಾಯಿ | 2100 |
| | ವೇದ ಪ್ರವೇಶ ವಾಚಾ ಒಬ್ಬ ವಿದ್ಯಾರ್ಥಿಯ ಎಲ್ಲಾ ಪತ್ರಿಕೆಗೆ ಸೇರಿ | 200 ರೂ ಕನಿಷ್ಠ 5 ವಿದ್ಯಾರ್ಥಿಗಳವರಗೆ ನಂತರ ಒಬ್ಬರಿಗೆ 10ರೂ | 21000 |
| 2 | ಕಾವ್ಯ 5000 * 6ಪತ್ರಿಕೆಗೆ | 4 ರೂಪಾಯಿ = 1,20,000 | 120000 |
| | ವೇದ ಪ್ರವೇಶ = 300ಪತ್ರಿಕೆಗೆ | 4 ರೂಪಾಯಿ | 1200 |
| | ವೇದ ಪ್ರವೇಶ ವಾಚಾ ಒಬ್ಬ ವಿದ್ಯಾರ್ಥಿಯ ಎಲ್ಲಾ ಪತ್ರಿಕೆಗೆ ಸೇರಿ | 200 ರೂ ಕನಿಷ್ಠ 5 ವಿದ್ಯಾರ್ಥಿಗಳ ವರಗೆ ನಂತರ ಒಬ್ಬರಿಗೆ 10ರೂ | 12000 |
| 3 | ಸಾಹಿತ್ಯ 1500*6ಪತ್ರಿಕೆಗೆ | 5 ರೂಪಾಯಿ | 45000 |
| | ವೇದ ಮೂಲ200ಪತ್ರಿಕೆಗೆ | 5 ರೂಪಾಯಿ | 1000 |
| | ವೇದ ಮೂಲ.ವಾಚಾ ಒಬ್ಬ ವಿದ್ಯಾರ್ಥಿಯ ಎಲ್ಲಾ ಪತ್ರಿಕೆಗೆ ಸೇರಿ | 200 ರೂ ಕನಿಷ್ಠ 5 ವಿದ್ಯಾರ್ಥಿಗಳ ವರಗೆ ನಂತರ ಒಬ್ಬರಿಗೆ 10ರೂ | 6000 |
| 4 | 5.ಪರೀಕ್ಷಾ ಕೇಂದ್ರಗಳಿಗೆ | ಸಾದಿಲ್ವಾರು ವೆಚ್ಚ 3000 * 5 | 15000 |
| 5 | ಮೌಲ್ಯಮಾಪನ ವೆಚ್ಚ | 5 ಕೇಂದ್ರಗಳಿಗೆ | 105800 |
| 6 | ಖಾಲಿ ಅಂಕಪಟ್ಟಿ | ಮುದ್ರಣಕ್ಕೆ | 100000 |
| 7 | ಅಂಕಪಟ್ಟಿಯಲ್ಲಿ ಅಂಕ ನಮೂದಿಸಲು | | 100000 |
| | | ಒಟ್ಟು ವೆಚ್ಚದ ವಿವರ | 601100.00 |
| | | | 834600.00 |
| | | | 1435700.00 |

| ಕ್ರ.ಸಂ | | ಪ್ರಮಾಣ | ಮೊತ್ತ |
|---|---|---|---|
| 1 | ಬಿ ಎ ಹೊಸ ಪಠ್ಯ 37 x 2 ಸೆಟ್ಸ್ | 74 x 250 | 18500 |
| 2 | ಬಿ ಎ ಹಳೆಯ ಮತ್ತು II, III ತರಗತಿಗಳಿಗೆ | 131 x 2 ಸೆಟ್ಸ್ 262 250 | 65500 |
| 3 | ಎಂ ಎ ಹೊಸ ಪಠ್ಯ 70 x 2 ಸೆಟ್ಸ್ | 140 x 300 ಗೌರವಧನ | 42000 |
| 4 | ಎಂ ಎ ಹಳೆಯ ಪಠ್ಯ I, II ತರಗತಿಗಳಿಗೆ | 124 x 2248 x 300 | 74400 |
| 5 | ಪರಿಶೀಲನ ಸಭೆಗೆ ಪ್ರಾಧ್ಯಾಪಕರಿಗೆ 39 (ಜನ) 2(ದಿನ) | 78 x 300 ಗೌರವಧನ | 23400 |
| 6 | ಪ್ರಯಾಣ ಭತ್ಯೆ ಒಬ್ಬರಿಗೆ 1000 x 39 | | 39000 |
| 7 | ಡಿ. ಟಿ.ಪಿ ವೆಚ್ಚ ( ಪ್ರಶ್ನಪತ್ರಿಕೆ ) 362 | | 50000 |

| | | | |
|---|---|---|---|
| 8 | ಖಾಸಗಿ ಪರೀಕ್ಷಾಕೇಂದ್ರಕ್ಕೆ | | 10000 |
| 9 | ಬಿ ಎ ಮೌಲ್ಯಮಾಪನಕ್ಕೆ 2625 ( ವಿದ್ಯಾರ್ಥಿಗಳ ) x 6 = 15,750 x 7 | | 110250 |
| 10 | ಮೌಲ್ಯಮಾಪನ ಪ್ರಯಾಣ ಭತ್ಯೆ 1000 x 50 | | 50000 |
| 11 | ದಿನ ಭತ್ಯೆ 250 x 50 = 12,500 (4 ದಿನಕ್ಕೆ) x 2 | | 50000 |
| 12 | ಎಂ ಎ 500 ವಿದ್ಯಾರ್ಥಿಗಳು 500 x 5(ಪತ್ರಿಕೆ) =2500 x 8 | | 20000 |
| 13 | 50 ( ಜನ ನಾಲ್ಕು ದಿನಕ್ಕೆ ) 200 x 250 | | 50000 |
| 14 | ಪ್ರಯಾಣಭತ್ಯೆ 50 x 1000 | | 50000 |
| 15 | ಕಾಲೇಜಿನ ಸಾದಿಲ್ವಾರು ವೆಚ್ಚ , ಪ್ರತಿ ಕಾಲೇಜಿಗೆ 5000 x 30 | | 150000 |
| 16 | ಅಂಕಪಟ್ಟಿ ಮುದ್ರಣಕ್ಕೆ | | 100000 |
| 17 | ಉತ್ತರ ಪತ್ರಿಕ್ಕೆ ಮುದ್ರಣಕ್ಕೆ ಬಿ ಎ | | 99000 |
| 18 | ಉತ್ತರ ಪತ್ರಿಕ್ಕೆ ಮುದ್ರಣಕ್ಕೆ ಎಂ ಎ | | 99000 |
| 19 | ಪರೀಕ್ಷಾ ಕೇಂದ್ರಗಳಿಗೆ ವಿಚಕ್ಷಣಾದಳ ಭೇಟಿಗೆ | | 50000 |
| 20 | ಪರೀಕ್ಷಾಸಾಮಗ್ರಿ | | 50000 |
| 21 | ಇತರೆ ವೆಚ್ಚ ನಾಮಾಂಕಿತ ಪಟ್ಟಿಯನ್ನು ಪರಿಶೀಲನಾ ಸಮಯದಲ್ಲಿ(ಕಾಫಿ ಮತ್ತು | | 10000 |
| | | ಒಟ್ಟು | 1211050.00 |

ನಿರ್ಣಯ: **2014–15ನೇ ಸಾಲಿನ ಪರೀಕ್ಷಾ ವೆಚ್ಚದ ಅಂದಾಜಿಗೆ ಸಭೆಯು ಅನುಮೋದನೆ ನೀಡಿತು.**

**ವಿಷಯ 6: ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವಹಿಸಿಕೊಡುವ ಬಗೆಗೆ.**

ಟಿಪ್ಪಣಿ: ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತು, ಈ ಸಂಸ್ಥೆಯನ್ನು ಎಲ್ಲ ಸ್ಥಿರ – ಚರಾಸ್ತಿ ಮತ್ತು ನೇಮಕಗೊಂಡ ಖಾಯಂ ಸಿಬ್ಬಂದಿಗಳೊಡನೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿ ಅದರ ಆಡಳಿತ ನಿರ್ವಹಣೆಯನ್ನು ವಹಿಸಿಕೊಡುವ ಸಂಬಂಧ ಈಗಾಗಲೇ ಸರ್ಕಾರದ ಹಂತದಲ್ಲಿ ಅನೇಕ ಬಾರಿ ಚರ್ಚೆ ನಡೆದಿದೆ. ಆಚಾರ್ಯ ಶ್ರೀ ಭಗವದ್ ರಾಮಾನುಜರ ತಪೋಭೂಮಿಯೂ, ಕಾರ್ಯಕ್ಷೇತ್ರವೂ ಆದ ಮೇಲುಕೋಟೆಯಲ್ಲಿ ಅವರ ಸಿದ್ಧಾಂತದ ಪ್ರಚಾರ ಹಾಗೂ ಪ್ರಕಾಶನಗಳನ್ನು ಹೊರತರುವ ದೃಷ್ಟಿಯಿಂದ 1976ರಲ್ಲಿ ಈ ಸರ್ಕಾರದ ಆದೇಶದಿಂದ ಸಂಸ್ಥೆಯು ಪ್ರಾರಂಭವಾಯಿತು (ಆರ್ 136 ಎಂಇಟಿ 76 ದಿನಾಂಕ 15.10.1976). ಈ ಸಂಸ್ಥೆಯು ತನ್ನ ಮೂಲ ಧ್ಯೇಯೋದ್ದೇಶಗಳಂತೆ ಕಳೆದ 4 ದಶಕಗಳಲ್ಲಿ ಸಂಸ್ಕೃತ/ಶಾಸ್ತ್ರ ಮತ್ತು ಭಾರತೀಯ ಪ್ರಾಚೀನ ವಿಜ್ಞಾನ ಕ್ಷೇತ್ರಗಳಲ್ಲಿ ಅನೇಕ ಸಂಶೋಧನ ಯೋಜನೆಗಳನ್ನು ಹಮ್ಮಿಕೊಂಡು, ಪೂರ್ಣಗೊಳಿಸಿ ತನ್ನ ಪ್ರಕಟಣೆಗಳ ಮೂಲಕ ವಿಶ್ವದಾದ್ಯಂತ ಪ್ರಖ್ಯಾತಿಯನ್ನು ಪಡೆದಿದೆ. ಪ್ರಕೃತ, ಸಂಶೋಧನ ಕಾರ್ಯಕ್ಕೆ ಬೇಕಾದ ಸುಮಾರು 30,000 ಗ್ರಂಥಗಳನ್ನು ಒಳಗೊಂಡ ಗ್ರಂಥಾಲಯ, ಸುಮಾರು 10,000 ತಾಳೆಗರಿ ಗ್ರಂಥಗಳ ಸಂಗ್ರಹ, ಗಣಕಯಂತ್ರ ಪ್ರಯೋಗಾಲಯ, ಸುಸಜ್ಜಿತ ಸಭಾಂಗಣ ಮತ್ತು ಅತಿಥಿಗೃಹಗಳ ಇತ್ಯಾದಿ ಸೌಲಭ್ಯಗಳನ್ನು ಈ ಪರಿಸರ ಹೊಂದಿದೆ. ಸದರಿ ಸಂಸ್ಥೆಯು ಸರ್ಕಾರದಿಂದ ಪೂರ್ಣ ಪ್ರಮಾಣದ ಅನುದಾವನ್ನು ಪಡೆಯುತ್ತಿದ್ದು, ಅದರ ಹಿತದೃಷ್ಟಿಯಿಂದ ಸರ್ಕಾರವು ಈ ಸಂಸ್ಥೆಯನ್ನು ವಶಕ್ಕೆ ಪಡೆದು ಅದರ ಆಡಳಿತವನ್ನು ವಿಶ್ವವಿದ್ಯಾಲಯಕ್ಕೆ ನೀಡುವ ಪ್ರಕ್ರಿಯೆಯನ್ನು ಆರಂಭಿಸಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ 2 ಪರಿಚ್ಛೇದ 7(2) ನಿಯಮದಡಿಯಲ್ಲಿ, ಅಂದಿನಿಂದ ಸಂಸ್ಕೃತ ವೇದ ಶಿಕ್ಷಣ ನೀಡುತ್ತಿರುವ ಸ್ವಾಯತ್ತ ಸಂಸ್ಥೆಗಳನ್ನು ಈ ವಿಶ್ವವಿದ್ಯಾಲಯದೊಂದಿಗೆ ಸಂಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು ಎಂದು ಉಲ್ಲೇಖಿಸಲಾಗಿದೆ. ಹೀಗಾಗಿ, ವಿಶ್ವವಿದ್ಯಾಲಯಕ್ಕೆ ಈ ಸಂಸ್ಥೆಯನ್ನು ವಹಿಸಿಕೊಡುವುದು ಉಚಿತವೆಂದು ನಿರ್ಣಯಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು, ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತನ್ನು ಅನುದಾನ ಸಹಿತವಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಿದಲ್ಲಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಆ ಸಂಸ್ಥೆಯ ಧ್ಯೇಯೋದ್ದೇಶಗಳಿಗೆ ಚ್ಯುತಿ ಉಂಟಾಗದಂತೆ ಆ ಸಂಸ್ಥೆಯ ಆಡಳಿತ ನಿರ್ವಹಣೆಯನ್ನು ನಡೆಸಿಕೊಂಡು ಹೋಗಲು ಸಿದ್ಧವಿದೆಯೆಂದು ಉನ್ನತ ಶಿಕ್ಷಣ ಸಚಿವರಿಗೆ ಪತ್ರ ಬರೆಯಲಾಗಿದೆ. ಸಭೆಯ ಅವಗಾಹನೆಗೆ ಮಂಡಿಸಿದೆ. ಈ ಸಂಸ್ಥೆಯನ್ನು ವಿಶ್ವವಿದ್ಯಾಲಯವು ವಹಿಸಿಕೊಂಡ ನಂತರ ಸ್ಥಳೀಯ ವಿದ್ವಾಂಸರು ಹಾಗೂ

ಹಿರಿಯ ಸಾಮಾಜಿಕ ಪ್ರಮುಖರನ್ನು ಒಳಗೊಂಡ ಆಡಳಿತ ನಿರ್ವಹಣಾ ಸಮಿತಿಯನ್ನು ರಚಿಸಬಹುದಾಗಿದೆ. ಹಾಗೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರನ್ನು ಸಂಸ್ಥೆಯ ನಿರ್ದೇಶಕರನ್ನಾಗಿ ನೇಮಿಸಬಹುದಾಗಿದೆ.

ನಿರ್ಣಯ: **ಕುಲಪತಿಗಳಿಂದ ಸಮಗ್ರ ವಿವರಗಳನ್ನು ಪಡೆದ ನಂತರ ಡಾ.ವನಿತಾ ರಾಮಸ್ವಾಮಿಯವರು, ಈ ಸಂಸ್ಥೆಯು ಕೇವಲ ಒಂದು ವಿಷಯದ ಅಧ್ಯಯನಕ್ಕೆ ಸೀಮಿತವಾದುದರಿಂದ, ಅಂತಹ ಷರತ್ತಿನ ಬಗ್ಗೆ ಪುನರಾಲೋಚನೆ ನಡೆಸಲು ಸೂಚಿಸಿದರು. ವಿಶ್ವವಿದ್ಯಾಲಯವು ತನ್ನ ಆಡಳಿತಕ್ಕೆ ಇದನ್ನು ಒಳಪಡಿಸಿಕೊಳ್ಳುವಾಗ ಆ ಸಂಸ್ಥೆಯ ಧ್ಯೇಯೋದ್ದೇಶಗಳಿಗೆ ಚ್ಯುತಿ ಉಂಟಾಗದಂತೆ ಹಾಗೂ ಈ ಹಿಂದೆ ಕರ್ನಾಟಕ ಸರ್ಕಾರವು ಸಂಸ್ಥೆಯ ಸಂಶೋಧನೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಸ್ಟಿಸ್ ಡಾ. ಎಂ. ರಾಮಾ ಜೋಯಿಸ್ ಇವರ ಅಧ್ಯಕ್ಷತೆಯ ಉನ್ನತ ಸಮಿತಿಯು ನೀಡಿದ ಶಿಫಾರಸ್ಸಿನಂತೆ ಆ ಸಂಸ್ಥೆಯ ಆಡಳಿತ ನಿರ್ವಹಣೆಯನ್ನು ನಡೆಸಿಕೊಂಡು ಹೋಗುವುದಾಗಿ ಮತ್ತು ಆಧುನಿಕವಾದ ವಿಷಯಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಬದ್ಧವಾಗಿರುವುದಾಗಿ ಪತ್ರ ಬರೆದುದನ್ನು ಅಧ್ಯಕ್ಷರು ಸಭೆಗೆ ತಿಳಿಸಿದರು. ಈ ವಿಷಯಕ್ಕೆ ಅನುಮೋದನೆ ನೀಡಲಾಯಿತು.**

ವಿಷಯ 7: **ಬಿ.ಎ. ಸಂಸ್ಕೃತ ಪದವಿ ಪರೀಕ್ಷೆಯಲ್ಲಿ ಯೋಗ ವಿಜ್ಞಾನ ಮತ್ತು ಪ್ರಯೋಗ ಐಚ್ಛಿಕ ವಿಷಯವನ್ನು ಹಾಗೂ ಎಂ.ಎ. ಸಂಸ್ಕೃತ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಸಾಂಖ್ಯಯೋಗ ವಿಜ್ಞಾನ ಮತ್ತು ಪ್ರಯೋಗ – ಈ ವಿಷಯಗಳನ್ನು ಅಳವಡಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯದ ಬಿ.ಎ. ಸಂಸ್ಕೃತ ಪದವಿ ಪರೀಕ್ಷೆಯಲ್ಲಿ ಯೋಗ ವಿಜ್ಞಾನ ಮತ್ತು ಪ್ರಯೋಗ ಐಚ್ಛಿಕ ವಿಷಯವನ್ನು ಹಾಗೂ ಎಂ.ಎ. ಸಂಸ್ಕೃತ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಸಾಂಖ್ಯಯೋಗ ವಿಜ್ಞಾನ ಮತ್ತು ಪ್ರಯೋಗ ಐಚ್ಛಿಕ ವಿಷಯವನ್ನು ಅಳವಡಿಸುವ ಬಗೆಗೆ ಅನೇಕ ಹಿರಿಯ ಸಾಮಾಜಿಕ ಪ್ರಮುಖರು ಸಲಹೆ – ಸೂಚನೆಗಳನ್ನು ನೀಡಿರುತ್ತಾರೆ. ಈ ಬಗ್ಗೆ ವಿಶ್ವವಿದ್ಯಾಲಯವು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಸಭೆಯ ಅವಗಾಹನೆಗೆ ಮತ್ತು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: **ಸದರಿ ವಿಷಯದ ಬಗೆಗೆ ಅಧ್ಯಯನ ಮಂಡಳಿಯನ್ನು ರಚಿಸಿ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ಕುಲಪತಿಗಳಿಗೆ ಸೂಚಿಸಿತು.**

ವಿಷಯ 8: **ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜು ಹಾಗೂ ಗೋಕರ್ಣದ ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು – ಈ ಕಾಲೇಜುಗಳಿಗೆ ಸಿಬ್ಬಂದಿಯ ನಿಯೋಜನೆಯ ಬಗೆಗೆ.**

ಟಿಪ್ಪಣಿ: ಮೈಸೂರಿನಲ್ಲಿರುವ ಮಹಾರಾಜ ಸಂಸ್ಕೃತ ಕಾಲೇಜು, ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿದೆ. ಈ ಪರಿಸರದಲ್ಲಿ ಉನ್ನತ ಸಂಶೋಧನ ಕೇಂದ್ರವನ್ನು ಪ್ರಾರಂಭಿಸಲು ವಿಶ್ವವಿದ್ಯಾಲಯವು ಉದ್ದೇಶಿಸಿದೆ. ಆ ಭಾವಿ ಕೇಂದ್ರಕ್ಕೆ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಜನಾ ಸಹಾಯಕರೊಬ್ಬರನ್ನು ನಿಯೋಜಿಸಬೇಕಿದೆ. ಈ ಹಿನ್ನೆಲೆಯಲ್ಲಿ, ವಿದುಷಿ ತೇಜಸ್ವಿನಿ ಡಿ., ಯೋಜನಾ ಸಹಾಯಕರು (ಶೈಕ್ಷಣಿಕ), ಇವರನ್ನು ನಿಯೋಜನೆಯ ಮೇರೆಗೆ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿಗೆ ವರ್ಗಾಯಿಸಬಹುದಾಗಿದೆ. ಇವರು, ಸಂಶೋಧನ ಕೇಂದ್ರದ ಪ್ರಾರಂಭದ ಕುರಿತ ಪ್ರಸ್ತಾವನೆಯ ರೂಪುರೇಷೆಯ ತಯಾರಿಕೆ ಮುಂತಾದ ಕಾರ್ಯಗಳನ್ನು ನಿರ್ವಹಿಸಲಿದ್ದಾರೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಗೋಕರ್ಣದ ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜಿನಲ್ಲಿ, ಡಾ. ಬಿ.ವಿ. ವೆಂಕಟರಮಣ, ವಿದ್ವಾನ್ ರಾಘವ ಕೆ.ಎಲ್., ವಿದುಷಿ ಶಕುಂತಲಾ ಭಟ್, ಇವರು ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದರು. ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳು ಜನವರಿ ತಿಂಗಳಿನಲ್ಲಿ ಮುಗಿಯುವುದರಿಂದ ಹಾಗೂ ಪರೀಕ್ಷಾಂಗವನ್ನು ಬಲಪಡಿಸುವ ದೃಷ್ಟಿಯಿಂದ, ವಿಶ್ವವಿದ್ಯಾಲಯದ ಸಂಜೆ ಕಾಲೇಜಿನ ಪ್ರಾಚಾರ್ಯರಾಗಿ ಡಾ. ಬಿ.ವಿ. ವೆಂಕಟರಮಣ, ಇವರನ್ನು ನಿಯೋಜಿಸಬಹುದಾಗಿದೆ. ಡಾ. ಕೃಷ್ಣ ಜೋಶಿ, ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ., ಇವರನ್ನು ಗೋಕರ್ಣ ಕಾಲೇಜಿನ ಪ್ರಭಾರಿ ಪ್ರಾಚಾರ್ಯರಾಗಿ ನಿಯೋಜಿಸಬಹುದಾಗಿದೆ. ವಿದುಷಿ ಶಕುಂತಲಾ ಭಟ್, ಇವರನ್ನು ಹಿಂದಕ್ಕೆ ಕರೆಸಿಕೊಳ್ಳಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿದುಷಿ ಡಿ. ತೇಜಸ್ವಿನಿ, ಯೋಜನಾ ಸಹಾಯಕರು (ಶೈಕ್ಷಣಿಕ), ಇವರನ್ನು ನಿಯೋಜನೆಯ ಮೇರೆಗೆ ಮುಂದಿನ ಆದೇಶದವರೆಗೆ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿಗೆ ವರ್ಗಾಯಿಸಲು ಸಭೆಯು ತೀರ್ಮಾನಿಸಿತು. ಇವರು, 6 ತಿಂಗಳ ಒಳಗಾಗಿ ಸಂಶೋಧನ ಕೇಂದ್ರದ ಪ್ರಾರಂಭದ ಕುರಿತ ಸಮಗ್ರ ಪ್ರಸ್ತಾವನೆಯ ರೂಪುರೇಷೆಯ ತಯಾರಿಕೆ, ಇವರಿಗೆ ವಹಿಸಿರುವ ಗ್ರಂಥಸಂಪಾದನೆಯ ಕಾರ್ಯ ಹಾಗೂ ಕಾಲೇಜಿನ ಗ್ರಂಥಾಲಯದ ನಿರ್ವಹಣೆ ಮುಂತಾದ ಕಾರ್ಯಗಳನ್ನು ನಿರ್ವಹಿಸುವುದು. ಈ ಬಗ್ಗೆ ಕಾಲಕಾಲಕ್ಕೆ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸುವುದು.**

**ಡಾ. ಬಿ.ವಿ. ವೆಂಕಟರಮಣ, ವಿದುಷಿ ಶಕುಂತಲಾ ಭಟ್, ಇವರ ನಿಯೋಜನೆಯ ಅವಧಿಯನ್ನು ಮುಂದಿನ ಆದೇಶದವರೆಗೆ ಅವರ ಸೇವೆಯನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸುವುದು. ಡಾ.ಬಿ.ವಿ.ವೆಂಕಟರಮಣ, ಸಹ ಪ್ರಾಧ್ಯಾಪಕರು, ಇವರನ್ನು ಸಂಚಿ ಕಾಲೇಜಿನ ಪ್ರಾಚಾರ್ಯರನ್ನಾಗಿ ನಿಯೋಜಿಸುವುದು. ಡಾ. ಕೃಷ್ಣ ಜೋಶಿ, ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ., ಇವರನ್ನು ಗೋಕರ್ಣ ಕಾಲೇಜಿನ ಪ್ರಭಾರಿ ಪ್ರಾಚಾರ್ಯರಾಗಿ ನಿಯೋಜಿಸಲು ಸಭೆಯು ಒಪ್ಪಿಗೆ ನೀಡಿತು. ಆ ಕಾಲೇಜಿನಲ್ಲಿ ಅಗತ್ಯವಿರಬಹುದಾದ ಅಧ್ಯಾಪಕರ ಕೊರತೆಯನ್ನು ನೀಗಲು ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರನ್ನು ನಿಯೋಜಿಸಲು ಸಭೆಯು ಸೂಚಿಸಿತು.**

**ವಿಷಯ 9: ವಿದ್ವಾನ್ ಪಿ.ಆರ್.ಪಾಗೋಜಿ, ಉಪಕುಲಸಚಿವರು, ಕ.ಸಂ.ವಿ., ಇವರ ಖಾಯಂಪೂರ್ವ ಸೇವಾವಧಿಯನ್ನು ಘೋಷಿಸುವ ಬಗೆಗೆ.**

ಟಿಪ್ಪಣಿ: ವಿದ್ವಾನ್ ಪಿ.ಆರ್.ಪಾಗೋಜಿ, ಉಪಕುಲಸಚಿವರು, ಕ.ಸಂ.ವಿ., ಇವರ ಪೋಲೀಸ್ ತಪಾಸಣಾ ವರದಿಯು ಬಂದಿದ್ದು, ನ್ಯಾಯಾಲಯದಲ್ಲಿರುವ ಪ್ರಕರಣದ ಅಂತಿಮ ತೀರ್ಪಿಗೆ ಒಳಪಟ್ಟು ಖಾಯಂಪೂರ್ವ ಸೇವಾವಧಿಯನ್ನು ಘೋಷಿಸುವಂತೆ ಸದರಿಯವರು ಪತ್ರ ನೀಡಿರುತ್ತಾರೆ. ಸಭೆಯಲ್ಲಿ ಚರ್ಚೆಗಾಗಿ ಮಂಡಿಸಿದೆ.

ನಿರ್ಣಯ: **ವಿದ್ವಾನ್ ಪಿ.ಆರ್.ಪಾಗೋಜಿ, ಉಪಕುಲಸಚಿವರು, ಕ.ಸಂ.ವಿ., ಇವರಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನು ವಿಸ್ತೃತವಾಗಿ ಸಭೆಯು ಚರ್ಚಿಸಿತು. ಕರ್ನಾಟಕ ನಾಗರೀಕ ಸೇವಾ ನಿಯಮಗಳು 1977ರ ಅನ್ವಯ ಖಾಯಂಪೂರ್ವ ಸೇವಾವಧಿಯ ಘೋಷಣೆಯ ಬಗೆಗೆ ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ ಯಾವುದೇ ಸಿಬ್ಬಂದಿಯ ನೇಮಕಾತಿಯ ವಿಚಾರಣೆಯು ನ್ಯಾಯಾಲಯದಲ್ಲಿರುವಾಗ ಅಂತಹ ವ್ಯಕ್ತಿಯ ಖಾಯಂಪೂರ್ವ ಸೇವಾವಧಿಯು ತೃಪ್ತಿಕರವಾಗಿದ್ದಾಗ, ಸದರಿ ಪ್ರಕರಣ ಅಂತಿಮ ತೀರ್ಪಿಗೆ ಒಳಪಟ್ಟು ಮತ್ತು ಸರ್ಕಾರದ ತನಿಖೆಯ ಅಂತಿಮ ತೀರ್ಪಿಗೆ ಒಳಪಟ್ಟು ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಬಹುದಾಗಿದೆ. ಸದರಿಯವರ ಸೇವೆಯು ತೃಪ್ತಿಕರವಾಗಿರುವುದರಿಂದ ಮತ್ತು ಇವರ ವಿರುದ್ಧ ಯಾವುದೇ ಪೋಲೀಸ್ ಪ್ರಕರಣವು ಇಲ್ಲದಿರುವುದರಿಂದ ನಿಯಮಾನುಸಾರ ಖಾಯಂಪೂರ್ವ ಸೇವಾವಧಿಯು ಮುಗಿದ ದಿನದಿಂದ ಅನ್ವಯವಾಗುವಂತೆ ಘೋಷಿಸುವ ಆದೇಶಪತ್ರವನ್ನು ಹೊರಡಿಸಬಹುದೆಂದು ಸಭೆಯು ನಿರ್ಣಯಿಸಿತು.**

**ಉನ್ನತ ಶಿಕ್ಷಣ ಇಲಾಖೆಯು ವಿದ್ವಾನ್ ಪಿ.ಆರ್.ಪಾಗೋಜಿ ಇವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ದಿನಾಂಕ 16.08.2014ರಂದು ಪತ್ರ ಬರೆದಿರುವ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧ ಮೊಕದ್ದಮೆ ಹೂಡಿರುವ ಫಿರ್ಯಾದುದಾರರು ಈಗಾಗಲೇ ಪ್ರೊಬೇಷನರಿ ಅವಧಿಯನ್ನು ಘೋಷಿಸಬಾರದೆಂಬ ಪತ್ರವನ್ನು ನೀಡಿರುವುದರಿಂದ, ಮತ್ತು ವಿದ್ವಾನ್ ಪಿ.ಆರ್.ಪಾಗೋಜಿಯವರು ವಿಶ್ವವಿದ್ಯಾಲಯ ಹಾಗೂ ಸರ್ಕಾರದ ವಿರುದ್ಧ ತಮ್ಮ ಬಗ್ಗೆ ಶಿಸ್ತುಕ್ರಮ ಕೈಗೊಳ್ಳಬಾರದೆಂದು ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು, ತಿರಸ್ಕೃತವಾದ ಹಿನ್ನೆಲೆಯಲ್ಲಿ ಸರ್ಕಾರದ ಹಿಂದಿನ ಶಿಸ್ತಿನ ಕ್ರಮ ಮುಂದುವರೆದಿರುವುದರಿಂದ, ಕುಲಸಚಿವರು ತಮ್ಮ ಹಂತದಲ್ಲಿ ಖಾಯಂಪೂರ್ವ ಸೇವಾವಧಿಯ ಘೋಷಣೆ ಮಾಡಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದರು.**

**ವಿಷಯ 10: ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳನ್ನು ವಿಶ್ವವಿದ್ಯಾಲಯದ ನಿರ್ದಿಷ್ಟ ಕೇಂದ್ರಗಳಲ್ಲಿ ನಡೆಸುವ ಬಗೆಗೆ**

ಟಿಪ್ಪಣಿ: ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳನ್ನು ವಿಶ್ವವಿದ್ಯಾಲಯದ ನಿರ್ದಿಷ್ಟ ಕೇಂದ್ರಗಳಲ್ಲಿ ನಡೆಸುವ ಬಗೆಗೆ ಪ್ರಶಿಕ್ಷಣ ಪರಿಷತ್ತಿನಲ್ಲಿ ನಿರ್ಣಯ ಕೈಗೊಳ್ಳಲಾಗುತ್ತು. ಆದರೆ, ಪ್ರಶಾಸನ ಸಮಿತಿಯ ಸಭೆಯಲ್ಲಿ ಈ ಬಗೆಗೆ ಪ್ರಶಿಕ್ಷಣ ಪರಿಷತ್ತಿನಲ್ಲಿ ಪುನಃ ಮಂಡಿಸಿ ಅಭಿಪ್ರಾಯ ಪಡೆಯುವಂತೆ ಸೂಚಿಸಲಾಗಿತ್ತು. ಸರ್ಕಾರವು ಪ್ರಶಿಕ್ಷಣ ಪರಿಷತ್ತಿನ ಸದಸ್ಯರ ನಾಮನಿರ್ದೇಶನವನ್ನು ಹಿಂಪಡೆದಿರುವ ಕಾರಣ, ಪ್ರಶಾಸನ ಸಮಿತಿಯ ಈ ಸಭೆಯಲ್ಲಿ ಈ ವಿಷಯದ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:** **ಶಾಸ್ತ್ರ/ವೇದ ವಿದ್ವದುತ್ತಮಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶಿಕ್ಷಣ ಪರಿಷತ್ತಿನಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಲು ಸೂಚಿಸಲಾಗಿತ್ತು. ಆದರೆ, ಪರೀಕ್ಷೆಗಳು ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಗ್ರಾಮೀಣ ಪರಿಸರದ ಅಭ್ಯರ್ಥಿಗಳಿಗೆ ಸಮಸ್ಯೆಯಾಗದಂತೆ ಹಿಂದಿನಂತೆಯೇ ಈಗಾಗಲೇ ಘೋಷಿಸಿರುವ ಪರೀಕ್ಷಾ ಕೇಂದ್ರಗಳಲ್ಲಿಯೇ ಪರೀಕ್ಷೆ ನಡೆಸುವುದು. ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳಿಗೆ ಮಾತ್ರ ವಿಶ್ವವಿದ್ಯಾಲಯವೇ ನೇರವಾಗಿ ಪರೀಕ್ಷಾಧಿಕಾರಿಯನ್ನು ನಿಯೋಜಿಸಿ ವಿದ್ಯಾರ್ಥಿಗಳ ಸಂಖ್ಯೆ 15ಕ್ಕಿಂತ ಕಡಿಮೆ ಇಲ್ಲದಂತೆ ನೋಡಿಕೊಂಡು ಪರೀಕ್ಷೆಗಳನ್ನು ನಡೆಸುವುದೆಂದು ತೀರ್ಮಾನಿಸಲಾಯಿತು. ವಿದ್ವನ್ಮಧ್ಯಮಾ ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ 20ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ಅತ್ಯಂತ ಸಮೀಪದ ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳನ್ನು ವರ್ಗಾಯಿಸಿ ಪರೀಕ್ಷೆ ನಡೆಸಲು ತೀರ್ಮಾನಿಸಲಾಯಿತು.**

**ವಿಷಯ 11:** **ಕೇಂದ್ರ ಸರ್ಕಾರದ ಡಿ.ಐ.ಟಿ ಪ್ರಾಜೆಕ್ಟ್ ಅನ್ನು ಅನುಷ್ಠಾನಗೊಳಿಸುವ ಬಗೆಗೆ**

ಟಿಪ್ಪಣಿ: ಕೇಂದ್ರ ಸರ್ಕಾರದ ಭಾಷಾವಿಭಾಗದ ಡಿ.ಐ.ಟಿ ಪ್ರಾಜೆಕ್ಟ್ ಗೆ ಸಂಬಂಧಿಸಿದಂತೆ ಪತ್ರ ಬಂದಿದ್ದು, ಇದನ್ನು ವಿಶ್ವವಿದ್ಯಾಲಯವು ಅನುಷ್ಠಾನಗೊಳಿಸಬೇಕಿದೆ. ಈ ಸಂಬಂಧ ವಿದ್ವಾನ್ ಋಷಿದೇವ ಭಾರ್ಗವ ಹಾಗೂ ಶ್ರೀ ಪರಿತೋಷ ದಾಸ್ ಇವರನ್ನು ಸಂಯೋಜಕರನ್ನಾಗಿ ನಿಯೋಜಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:** **ಈ ಯೋಜನೆಯ ವಿವರಗಳನ್ನು ಕುಲಸಚಿವರಾದ ಪ್ರೊ. ಎಂ.ಕೆ. ಶ್ರೀಧರ್ ಇವರು ಮಂಡಿಸಿದರು. ಈ ಯೋಜನೆಯ ಬಗ್ಗೆ ಸಭೆಯು ಸಂತಸದಿಂದ ಒಪ್ಪಿಗೆ ಸೂಚಿಸಿತು. ಮತ್ತು ಅದನ್ನು ಅನುಷ್ಠಾನಗೊಳಿಸುವ ಸಂಬಂಧ ಕ್ರಮವಹಿಸಲು ಒಪ್ಪಿಗೆ ನೀಡಿತು.**

**ವಿಷಯ 12:** **ಮಾನಸೋಲ್ಲಾಸ ಅನುವಾದ ಗ್ರಂಥವನ್ನು ವಿಶ್ವವಿದ್ಯಾಲಯದಿಂದಲೇ ಪ್ರಕಟಿಸುವ ಬಗೆಗೆ**

ಟಿಪ್ಪಣಿ: ಮಾನಸೋಲ್ಲಾಸ ಗ್ರಂಥದ ಪ್ರಕಟಣೆಯನ್ನು ದರೇಸಾ ಪ್ರಕಾಶನದ ಮೂಲಕ ಪ್ರಕಟಿಸುವ ಸಂಬಂಧ ಈ ಹಿಂದೆ ಪ್ರಶಾಸನ ಸಮಿತಿಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಗಿತ್ತು. ಆದರೆ, ದರೇಸಾ ಪ್ರಕಾಶನದವರು ಈ ವರ್ಷದಲ್ಲಿ ಆಯವ್ಯಯದಲ್ಲಿ ಪ್ರಕಟಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ವತಿಯಿಂದಲೇ ಪ್ರಕಟಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:** **ಮಾನಸೋಲ್ಲಾಸ ಗ್ರಂಥಸಂಪಾದನೆಯ ಕಾರ್ಯವು ಈಗಾಗಲೇ ಮುಗಿದಿದ್ದು, ಈ ಹಿಂದಿನ ಪ್ರಶಾಸನ ಸಮಿತಿಯ ತೀರ್ಮಾನದಂತೆ ದರೇಸಾ ಪ್ರಕಾಶನದವರೊಂದಿಗೆ ಮಾತುಕತೆ ನಡೆಸಲಾಯಿತು. ಆದರೆ, ಸದರಿ ಪ್ರಕಾಶನ ಸಂಸ್ಥೆಯು ಜಂಟಿಯಾಗಿ ಪ್ರಕಾಶನವನ್ನು ಮಾಡುವ ಪ್ರಸ್ತಾವನೆ ಇಟ್ಟಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಉಪಲಬ್ಧವಿರುವ ಸಂಪನ್ಮೂಲವನ್ನು ಮಾತ್ರ ಬಳಸಿ ಪ್ರಕಟಿಸಬೇಕೆಂದು ತೀರ್ಮಾನಿಸಲಾಯಿತು. ವಿಶ್ವವಿದ್ಯಾಲಯವೇ ಪ್ರಕಾಶನದ ಸಂಪೂರ್ಣ ವೆಚ್ಚವನ್ನು ಭರಿಸಿದಲ್ಲಿ ಒಬ್ಬ ಅಧಿಕೃತ ಮಾರಾಟಗಾರರನ್ನು ನಿಗದಿಪಡಿಸುವುದು. ವಿಶ್ವವಿದ್ಯಾಲಯದಲ್ಲಿ ದಾಸ್ತಾನು ಸಮಸ್ಯೆಯಿರುವ ಕಾರಣ 500 ಪ್ರತಿಗಳನ್ನು ಮಾತ್ರ ಮುದ್ರಿಸಬಹುದು. ಈ ಗ್ರಂಥಗಳ ಪ್ರಕಾಶನ ಮಾಡುವಾಗ ಜಂಟಿಯಾಗಿ ಮತ್ತೊಂದು ಪ್ರಕಾಶನ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಆ ಸಂಸ್ಥೆಯು ಮಾಡುವ ಒಟ್ಟು ಪ್ರಕಾಶನ ವೆಚ್ಚದಲ್ಲಿ ಅರ್ಧದಷ್ಟನ್ನು ವಿಶ್ವವಿದ್ಯಾಲಯವು ಆರಂಭದಲ್ಲಿ ಪಾವತಿಸಿ ಮುಂಬರುವ 2 ವರ್ಷಗಳಲ್ಲಿ 4 ಕಂತುಗಳಲ್ಲಿ ಆ ಮೊತ್ತವನ್ನು ಹಿಂಪಡೆಯುವುದು. ಇದರಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆ ಇರದೇ ಪ್ರಕಾಶನದಲ್ಲಿ ಹೂಡುವ ಮೊತ್ತವು ತಿರುಗಿ ಬಂದಂತಾಗುವುದು. ಈ ಬಗ್ಗೆ ಕಾನೂನಿನಂತೆ ಒಡಂಬಡಿಕೆ ಪತ್ರವನ್ನು ಸಂಸ್ಥೆಯ ಜೊತೆಗೆ ಮಾಡಿಕೊಳ್ಳುವುದೆಂದು ಸಭೆಯು ತೀರ್ಮಾನಿಸಿತು.**

**ವಿಷಯ 13:** **ಸಂಸ್ಕೃತೋತ್ಸವದ ಒಟ್ಟು ವೆಚ್ಚವನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ವಿಶ್ವವಿದ್ಯಾಲಯವು 2014-15ನೇ ಸಾಲಿನಲ್ಲಿ ಸಂಸ್ಕೃತೋತ್ಸವ ಕಾರ್ಯಕ್ರಮಗಳನ್ನು ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದೆ. ಇದರ ಒಟ್ಟು ವೆಚ್ಚವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರ.ಸಂ | ಕಾರ್ಯಕ್ರಮಗಳು | ಸಂಸ್ಥೆ/ಕಾಲೇಜು | ಒಟ್ಟು ಮೊತ್ತ |
|---|---|---|---|
| 01 | ಆಮಂತ್ರಣ ಪತ್ರಿಕೆ, ಫ್ಲೆಕ್ಸ್ ಬ್ಯಾನರ್, ಛಾಯಾಚಿತ್ರ ಇತ್ಯಾದಿ | ಕ.ಸಂ.ವಿ/ನ್ಯಾಷನಲ್ ಕಾಲೇಜು | 26,373–00 |
| 02 | ಉದ್ಘಾಟನಾ ಕಾರ್ಯಕ್ರಮ | ಕ.ಸಂ.ವಿ/ನ್ಯಾಷನಲ್ ಕಾಲೇಜು | 5,400–00 |
| 03 | ವಿಚಾರ ಸಂಕಿರಣ | ಮೇಧಾದಕ್ಷಿಣಾಮೂರ್ತಿ ಸಂಸ್ಕೃತ ಕಾಲೇಜು, ಗೋಕರ್ಣ | 15,000–00 |
| 04 | ವಿಚಾರ ಸಂಕಿರಣ | ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ | 13,960–00 |
| 05 | ಗಾಂಧಿಸ್ಮೃತಿ ಕವಿಸಂಗಮ ಕಾರ್ಯಕ್ರಮ ಮತ್ತು ಸಂಸ್ಕೃತ ರೂಪಕೋತ್ಸವ | ಕ.ಸಂ.ವಿ (ವಿಡಿಯೋ) | 12,500–00 |
| | **ಒಟ್ಟು** | | **73,233–00** |

**ನಿರ್ಣಯ:** **2014ನೇ ಸಾಲಿನ ಸಂಸ್ಕೃತೋತ್ಸವದ ವೆಚ್ಚಕ್ಕೆ ಸಭೆಯು ಅನುಮೋದನೆ ನೀಡಿತು.**

**ವಿಷಯ 14:** **ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಮತ್ತು ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು – ಈ ಕಾಲೇಜುಗಳ ಪ್ರಾಚಾರ್ಯರ ನೇಮಕಾತಿಯ ನೀತಿ ನಿರೂಪಣೆಯ ಬಗೆಗೆ**

ಟಿಪ್ಪಣಿ: ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಮತ್ತು ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು – ಈ ಕಾಲೇಜುಗಳ ಪ್ರಾಚಾರ್ಯರ ನೇಮಕಾತಿಯ ನೀತಿ ನಿರೂಪಣೆಯ ಬಗೆಗೆ ಚರ್ಚೆಗಾಗಿ ಮಂಡಿಸಿದೆ. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು, ಈ ಕಾಲೇಜಿನ ಪ್ರಾಚಾರ್ಯರ ಹುದ್ದೆಗೆ ಐವರು ಅರ್ಜಿ ಸಲ್ಲಿಸಿರುತ್ತಾರೆ.

**ನಿರ್ಣಯ:** **ವಿಶ್ವವಿದ್ಯಾಲಯದ ಪರಿನಿಯಮ ಪರಿಶೀಲನ ಸಮಿತಿಯು ಈ ವಿಷಯದ ಬಗೆಗೆ ಚರ್ಚಿಸಿ ನೀತಿ ನಿರೂಪಣೆ ಮಾಡಲು ಸಭೆಯು ಸೂಚಿಸಿತು. ಈ ವಿಷಯವು ತುರ್ತಾಗಿ ಆಗಬೇಕಗಿರುವ ಕಾರಣ 1 ತಿಂಗಳ ಒಳಗಾಗಿ ನೀತಿಯನ್ನು ರೂಪಿಸಿ ಸಲ್ಲಿಸಲು ಸಭೆಯ ಅಧ್ಯಕ್ಷರನ್ನು ಸೂಚಿಸಲಾಯಿತು.**

**ವಿಷಯ 15:** **ಉನ್ನತ ಶಿಕ್ಷಣ ಇಲಾಖೆ (ವಿ.ವಿ) ಶಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ಗ್ರೂಪ್ 'ಡಿ' ನೇಮಕಾತಿ ಮಾಡುವ ಬಗೆಗೆ**

ಟಿಪ್ಪಣಿ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಕಛೇರಿಯಿಂದ ದಿನಾಂಕ 29.10.2014ರಂದು **ಇಡಿ 546 ಯುಎನ್ಇ 2014**ರ ಪತ್ರದ ಮೂಲಕ ಶ್ರೀ ನಾಗಯ್ಯ ಜಮೇದಾರ್ ಇವರನ್ನು ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು) ಶಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ನೇಮಕ ಮಾಡುವ ಬಗ್ಗೆ ವಿಶ್ವವಿದ್ಯಾಲಯದ ಕುಲಸಚಿವರಿಗೆ ಕೋರಿರುತ್ತಾರೆ.

**ನಿರ್ಣಯ:** **ಸದರಿ ಪ್ರಸ್ತಾವನೆಯನ್ನು ಗಮನಿಸಿ ನಿಯಮಾನುಸಾರ ಹೊರಗುತ್ತಿಗೆಯಲ್ಲಿ ಸೂಕ್ತ ವ್ಯಕ್ತಿಯನ್ನು ನೇಮಕ ಮಾಡಿ ಸರ್ಕಾರಿ ಇಲಾಖೆಯ ಸೇವೆಯಲ್ಲಿ ಒಂದು ವರ್ಷಗಳ ಕಾಲ ಕಳುಹಿಸುವುದು. ಅವರ ನೇಮಕವನ್ನು ಈಗಾಗಲೇ ಸೇವೆ ನೀಡುತ್ತಿರುವ ಮಾನಸ ಎಂಟರ್‌ಪ್ರೈಸಸ್ ಅವರಿಗೆ ವಹಿಸಿಕೊಡಬಹುದೆಂದು ನಿರ್ಣಯಿಸಲಾಯಿತು.**

**ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.**

**ಪ್ರೊ. ಎಂ.ಕೆ. ಶ್ರೀಧರ್**
ಸದಸ್ಯ ಕಾರ್ಯದರ್ಶಿ

**ಪ್ರೊ. ಶ್ರೀನಿವಾಸ ವರಖೇಡಿ**
ಅಧ್ಯಕ್ಷರು